C.R.P.67

| Form No.4 (Civil) Deposition Sheets (R.P.No.57) |
|---|

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

ಸ್ಪೆಷಲ್ ಸಿ ಸಂಖ್ಯೆಃ **49/2020**

ಪ್ರಾಸಾ. **13** ಚಾಸಾ. **25**

| | | |
|---|---|---|
| ಸಾಕ್ಷಿದಾರರ ಹೆಸರು | : | ಕೃಷ್ಣಪ್ಪ |
| ತಂದೆಯ ಹೆಸರು | : | ಲೇ. ಮುತ್ತಯ್ಯ |
| ವಯಸ್ಸು | : | 45 ವರ್ಷಗಳು |
| ಉದ್ಯೋಗ | : | ಕೂಲಿ ಕೆಲಸ |
| ವಾಸ | : | ಪಚ್ಚಾರಲಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು |

ಪ್ರಮಾಣ ವಚನ ಬೋಧಿಸಿದ ದಿನಾಂಕಃ **07.02.2026.**

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ಕೂಲಿ ಕೆಲಸ ಮಾಡುತ್ತೇನೆ. ಗುಡ್ಡೆ ನರಸಿಂಹಸ್ವಾಮಿ ದೇವಸ್ಥಾನ ನಮ್ಮೂರಿನ ಸಮೀಪ ದೇವಸ್ಥಾನ. ನಾನು ಯಾವುದೇ ಜಾನುವಾರುಗಳನ್ನು ಸದರಿ ದೇವಸ್ಥಾನದ ಬಳಿ ಮೇಯಿಸಿರುವುದಿಲ್ಲ ಆದರೆ ಸದರಿ ದೇವಸ್ಥಾನದ ಬಳಿ ಇರುವ 1 ಎಕರೆ ವಿಸ್ತೀರ್ಣದ ಜಮೀನನ್ನು ನಾನು ಕೂಲಿಯಾಗಿ ವ್ಯವಸಾಯ ಮಾಡಿದ್ದೆನು. ನನಗೆ ಜಯಮ್ಮ ಎನ್ನುವವರು ಗೊತ್ತಿಲ್ಲ. ಸದರಿ ದೇವಸ್ಥಾನದ ಸ್ಥಳದ ಸಮೀಪ ಬೇರೆ ಇತರ ವ್ಯಕ್ತಿಗಳು ಕುರಿ ಜಾನುವಾರುಗಳನ್ನು ಮೇಯಿಸುತ್ತಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಆರೋಪಿಗಳು ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಮೃತ ವ್ಯಕ್ತಿ ಗೊತ್ತಿಲ್ಲ. ನಾನು ಆರೋಪಿಗಳ ವಿರುದ್ಧ ಯಾವುದೇ ಹೇಳಿಕೆಯನ್ನು ಪೋಲೀಸರಿಗೆ ನೀಡಿಲ್ಲ.

**(**ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿದ್ದು**,** ಕೋರಿಕೆ ಸಮರ್ಪಕವಾಗಿದ್ದು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ**.)**

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

"ಸುಮಾರು 20-30 ವರ್ಷಗಳ ಹಿಂದೆ ...................... ಕಾನಾನು ರೀತಿ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ." ಎಂಬ ಹೇಳಿಕೆಯನ್ನು ಈಗ ನನಗೆ ಓದಿ ಹೇಳಿದಂತೆ ನಾನು ಆರೋಪಿಗಳ ವಿರುದ್ಧ ನುಡಿದಿಲ್ಲ. ನನಗೆ ಓದಿ ಹೇಳಿದ ಮತ್ತು ನಾನು ಅಲ್ಲಗಳೆದ ಹೇಳಿಕೆಯನ್ನು ಈಗ ನಿ**.**ಪಿ**-35** ಎಂದು ಗುರುತಿಸಲಾಯಿತು. ನನಗೆ ಆರೋಪಿಗಳ ಬಗ್ಗೆ ಮಾಹಿತಿ ಇದ್ದರೂ ಹಾಗೂ ನಿ.ಪಿ-35 ರಂತೆ ಸಂಗತಿಗಳು ಗೊತ್ತಿದ್ದರೂ ನಾನು ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಅಸತ್ಯ ನುಡಿದೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ  ಆರೋಪಿತರ ಪರ ವಕೀಲರಿಂದಃ</u>

ಆರೋಪಿತರ ಪರ ವಕೀಲರು ಹಾಜರಿದ್ದು ತಮ್ಮದು ಪಾಟೀ ಸವಾಲು ಏನೂ ಇಲ್ಲ ಎಂದು ಹೇಳುತ್ತಿದ್ದಾರೆ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸ. ಒ.

(ಸಿದ್ದಲಿಂಗ ಪ್ರಭು)
1 ನೇ ಹೆಚ್ಚುವರಿ  ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.